ಆದ್ದರಿಂದ ಅವರನ್ನು ಅಮಾನತ್ತು ಮಾಡುವುದರ ಜೊತೆಗೆ ಆ ಹೆಸರನ್ನು ಆ ಲೇಔಟ್‌ನಿಂದ ತೆಗೆದು ಹಾಕುವ ಕೆಲಸವನ್ನು ಸರ್ಕಾರ ಮಾಡಬೇಕು.

(ಉ) ಬ್ರಹ್ಮಾವರ ವಿಧಾನ ಸಭಾಕ್ಷೇತ್ರದಲ್ಲಿನ ಬೈರಂಪಳ್ಳಿ ಗ್ರಾಮದಲ್ಲಿ ಜಯ ಎಂಬ ಹುಡುಗಿ ಕಣ್ಮರೆಯಾಗಿರುವ ಬಗ್ಗೆ

†**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರ ಬೈರಂಪಳ್ಳಿ ಗ್ರಾಮದ ಹರಿಕೆಂಡಿಗೆ ಎಂಬಲ್ಲಿ ಜಯ ಎಂಬ ಹುಡುಗಿ ಮನೆಯಿಂದ ಹೋದವಳು ವಾಪಸ್ ಬಾರದಿದ್ದಾಗ ಅವಳ ಅಣ್ಣ ಗಣೇಶ್ ಎಂಬುವವರು 12-6-2004 ರಂದು ಕಾರ್ಕಳ ಗ್ರಾಮಾಂತರ ಪೊಲೀಸರಿಗೆ ಕಂಪ್ಲೇಟ್‌ನ್ನು ಕೊಟ್ಟರು. ಅದರ ನಂತರ ಹೆಣವು ಬ್ರಹ್ಮಾವರ ಕ್ಷೇತ್ರದ ಹಾವಂಜಿಯ ಹತ್ತಿರ ಸಿಕ್ಕಿತು. ಕಾರ್ಕಳ ಪೊಲೀಸರ ಹತ್ತಿರ ಹೋದಾಗ ನೀವು ಕೊಲೆ ಮಾಡಿದ್ದನ್ನು ನೋಡಿದ್ದೀರಾ? ತಳ್ಳಿದ್ದು ನೋಡಿದ್ದೀರಾ ಎಂದು ಕೇಳುತ್ತಾರೆ. ಅವಳು ರಿಕ್ಷಾದಲ್ಲಿ ಡ್ರೈವರ್ ಜೊತೆ ಹೋದಂಥದನ್ನು ಜನರು ಕಂಡಿದ್ದಾರೆ. ವಾಪಸ್ ಮನೆಗೆ ಬಾರದಿದ್ದದಕ್ಕೆ ಕಂಪ್ಲೆಂಟ್ ಕೊಟ್ಟರೆ ಕಂಪ್ಲೆಂಟ್ ಕೊಟ್ಟವರಿಗೇ ಪೊಲೀಸಿನವರು ಹೆದರಿಸುತ್ತಾರೆ. ಅದಕ್ಕೋಸ್ಕರ ಇನ್ನೂ ಏನೂ ಕ್ರಮ ತೆಗೆದುಕೊಂಡಿಲ್ಲ. ಶೀಘ್ರವಾಗಿ ತನಿಖೆಯಾಗಿ ಅದರ ಬಗ್ಗೆ ಮಾಹಿತಿಯನ್ನು ಒದಗಿಸಬೇಕು. ಏಕೆಂದರೆ ಊರಿನಲ್ಲಿ ಸ್ವಲ್ಪ ಗೊಂದಲ ಉಂಟಾಗಿದೆ. ಆದ್ದರಿಂದ ಮಾನ್ಯ ಸಚಿವರು ಸ್ಥಳೀಯ ಪೊಲೀಸರು ಅಥವಾ ಸಿ.ಓ.ಡಿ. ಯಾವುದಕ್ಕಾದರೂ ಕೊಟ್ಟು ತನಿಖೆಯನ್ನು ಮಾಡಿ ಅದರ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸದಸ್ಯರು ಬಹಳ ಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಈ ರೀತಿಯಾಗಿ ಆಗಿರತಕ್ಕ ಅನಾಹುತಕ್ಕೆ ಠಾಣೆಯಲ್ಲಿ...

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಅದು ನನ್ನ ಕ್ಷೇತ್ರಕ್ಕೂ ಬರುತ್ತದೆ. ಈ ಸಂಶಯಾಸ್ಪದ ಸಾವು ಸಂಭವಿಸಿ ಒಂದೂವರೆ ತಿಂಗಳಾಯಿತು. ಆದರೆ ಇದುವರೆಗೆ ಏನೂ ತನಿಖೆಯಾಗಿಲ್ಲ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದಂತೆ...

ಶ್ರೀ ಎಂ.ಪಿ. ಪ್ರಕಾಶ್ : ಸದನವು ನಿಯಮಾವಳಿಯ ಪ್ರಕಾರ ನಡೆಯಬೇಕೋ ಅಥವಾ ಈ ರೀತಿಯಾಗಿ ನಡೆಯಬೇಕೊ? ಶೂನ್ಯ ವೇಳೆಯಲ್ಲಿ ಅವರು ಪ್ರಸ್ತಾಪ ಮಾಡಿದ್ದಕ್ಕೆ ಇವರು ಪ್ರಸ್ತಾಪ ಮಾಡಲು ಬರುವುದಿಲ್ಲ ಸ್ವಾಮಿ. ನೀವು ಬೇರೆ ಒಂದು ಶೂನ್ಯ ವೇಳೆಗೆ ಪರ್ಮಿಷನ್ ತೆಗೆದುಕೊಂಡು ವಿಷಯವನ್ನು ತನ್ನಿ. ಎಲ್ಲರೂ ಎದ್ದು ಅವಕಾಶ ಕೇಳುವುದಾದರೆ ಹೇಗೆ? ನಾವು ನಿಯಮಾವಳಿಯ ಪ್ರಕಾರ ಹೋಗಬೇಕು. ದಯಮಾಡಿ ಸಹಕರಿಸಿ.

ಗೊಂದಲ

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಇನ್ನೊಂದು ಅಂಥದ್ದೇ ವಿಚಾರವನ್ನು ಪ್ರಸ್ತಾಪ ಮಾಡಲು ಮಾನ್ಯ ಕಳಸಪ್ಪ ಜಿ. ಬಂಡಿ ಯವರು ಸುಮಾರು ದಿವಸಗಳಿಂದ ಕಾಯುತ್ತಿದ್ದಾರೆ. ಅವರಿಗೊಂದು ಅವಕಾಶ ಕೊಡುತ್ತೇನೆ. ಅವರು ಇದ್ದಾರಾ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನನ್ನ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಉತ್ತರ ಹೇಳುವ ಮೊದಲೇ ನಿಂತು ಹೋಯಿತು.

ಅಧ್ಯಕ್ಷರು : ಅವರು ಸಂಬಂಧಪಟ್ಟ ಮಂತ್ರಿಯವರಿಂದ ಉತ್ತರವನ್ನು ಹೇಳಿಸುತ್ತಾರೆ.

ಅಧ್ಯಕ್ಷರು : ಅವರು ಸಂಬಂಧಪಟ್ಟ ಮಂತ್ರಿಯವರಿಂದ ಉತ್ತರವನ್ನು ಹೇಳಿಸುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರು ಅರ್ಧಂಬರ್ಧ ಮಾಡುವುದು ಸರಿಯಲ್ಲ. ಅವರು ಉತ್ತರವನ್ನು ಸಂಪೂರ್ಣ ಮಾಡಲಿ,

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದಂಥ ಪ್ರಶ್ನೆಯನ್ನು ಎತ್ತಿದ್ದಾರೆ. ಈ ರೀತಿಯಾಗಿ ಅನೇಕ ಪ್ರಕರಣಗಳು ಆಗಿರತಕ್ಕ ಸನ್ನಿವೇಶದಲ್ಲಿ ನಾನು ಈ ದಿವಸವೇ ಗೃಹ ಸಚಿವರ ಮೂಲಕ ಅಥವಾ ಅಧಿಕಾರಿಗಳ ಮೂಲಕ ಜಿಲ್ಲಾಧಿಕಾರಿಯವರಿಗೆ ಮತ್ತು ಪೋಲೀಸ್ ವರಿಷ್ಟಾಧಿಕಾರಿಯವರಿಗೆ ದೂರವಾಣಿಯ ಮೂಲಕ ಸಂಪರ್ಕ ಮಾಡಿ ಇವತ್ತು ಸಂಜೆಯ ಒಳಗಾಗಿ ಇಲ್ಲದಿದ್ದರೆ ನಾಳೆ ಅದಕ್ಕೆ ಸರಿಯಾದಂಥ ಉತ್ತರವನ್ನು ಕೊಡಿಸುತ್ತೇನೆ.

ಗೊಂದಲ

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಎಷ್ಟು ಜನರಿಗೆ ಶೂನ್ಯವೇಳೆಯಲ್ಲಿ ಅವಕಾಶ ಮಾಡಿಕೊಡಲು ಸಾಧ್ಯವಾಗುತ್ತದೆ ಎಂಬ ಬಗ್ಗೆ ಹಿರಿಯ ಸದಸ್ಯರಾದ ಮಾನ್ಯ ಶ್ರೀರಾಮ ರೆಡ್ಡಿಯವರು ಹೇಳಿಬಿಡಿ.

1.10 ಪಿ.ಎಂ

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ನಾವು ತಮ್ಮ ಕೊಠಡಿಗೆ ಬಂದು ವಿಷಯ ಪ್ರಸ್ತಾಪಿಸುವುದಕ್ಕೆ ಅನುಮತಿ ಕೊಡಬೇಕೆಂದು ಕೇಳಿ ಅನುಮತಿ ಪಡೆದು ಬಂದಿದ್ದೇವೆ. ಪ್ರಸ್ತಾಪಿಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು.

ಶ್ರೀ ಎಂ.ಪಿ. ರೇಣುಕಾಚಾರ್ಯ : ಸನ್ಮಾನ್ಯ ಅಧ್ಯಕ್ಷರೆ, 20ನೇ ತಾರೀಖು ಅಲ್ಲದೆ, 2–3 ಸಲ ತಮ್ಮನ್ನು ಭೇಟಿ ಮಾಡಿ ಪ್ರಮುಖವಾದ ವಿಷಯವೊಂದನ್ನು ಪ್ರಸ್ತಾಪಿಸುವ ಮೂಲಕ ಚರ್ಚೆಗೆ ಅನುಮತಿ ಕೊಡಬೇಕೆಂದು ಕೇಳಿಕೊಂಡಿದ್ದೆವು. ಇದುವರೆಗೂ ತಾವು ಅವಕಾಶ ಮಾಡಿಕೊಟ್ಟಿಲ್ಲ. ಇದು ದೇಶದ ಮರ್ಯಾದೆ ಪ್ರಶ್ನೆಯಾಗಿದ್ದು, ನನ್ನ ಮತಕ್ಷೇತ್ರದಲ್ಲಿ ಜರುಗಿರುವುದರಿಂದ ದಯಮಾಡಿ ಪ್ರಸ್ತಾಪಿಸಲು ಅವಕಾಶ ಕಲ್ಪಿಸಿಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೆ, ಹೊನ್ನಾಳಿಯಲ್ಲಿ ಏನಾಗಿದೆಯೆಂದರೆ, ಪಾಕಿಸ್ತಾನ ಧ್ವಜವನ್ನು ಹಾರಿಸಿದ್ದಾರೆ !! ಧ್ವಜವನ್ನು ಹಾರಿಸುವ ಮೂಲಕ ಅಲ್ಲಿ ನಾವು ಬಹಳ ಹೀನಾಯ ಪರಿಸ್ಥಿತಿ ಎದುರಿಸುತ್ತಿದ್ದೇವೆ.

ಅಧ್ಯಕ್ಷರು : ಹೆಗಡೆಯವರೆ, ಶೂನ್ಯ ವೇಳೆಯಲ್ಲಿ ನಾನು ಎಷ್ಟು ಮಂದಿ ಮಾನ್ಯ ಸದಸ್ಯರಿಗೆ ಅವಕಾಶ ಮಾಡಿಕೊಡಬೇಕು? ತಾವೇ ಹೇಳಿ. ಪ್ರತಿ ದಿನವೂ ಅವರವರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇನೆ. ಹೀಗಿರುವಾಗ ಎಲ್ಲರೂ ಎದ್ದು ನಿಂತರೆ ಹೇಗೆ? ನಾನೇನು ಮಾಡಲಿ?

(ಊ) ಹೊನ್ನಾಳಿ ತಾಲ್ಲೂಕಿನ ಚೀಲೂರು ಗ್ರಾಮದಲ್ಲಿ ಪಾಕಿಸ್ತಾನದ ಧ್ವಜ ಹಾರಿಸಿರುವ ಬಗ್ಗೆ

ಶ್ರೀ ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ) : ಮಾನ್ಯ ಸಭಾಧ್ಯಕ್ಷರೆ, ನನ್ನ ಮತಕ್ಷೇತ್ರವಾದ ಹೊನ್ನಾಳಿ ತಾಲ್ಲೂಕು ಚೀಲೂರು ಗ್ರಾಮದಲ್ಲಿ ಇಡೀ ದೇಶವೇ ತಲೆತಗ್ಗಿಸುವ ಅಹಿತಕರ ಘಟನೆ ಜರುಗಿದೆ. ಚೀಲೂರು ಗ್ರಾಮದಲ್ಲಿ ಯಾವ ಘಟನೆ ಜರುಗಬಾರದಿತ್ತೋ ಅಂತಹ ಘಟನೆ